International Journal of Kannada Research
www.kannadajournal.com

ISSN: 2454–5813
IJKR 2020; 6(2): 10-15
© 2020 IJKR
www.kannadajournal.com
Received: 08-01-2020
Accepted: 10-02-2020

**ಪ್ರೊ. ಬಿ.ಆರ್. ರಾಜು**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ ಗೋಖಲೆ
ಸೆಂಟೆನರಿ ಕಾಲೇಜು,
ಅಂಕೋಲಾ, ಉತ್ತರ ಕನ್ನಡ

# ಬಸವಣ್ಣನವರ ವಚನಗಳಲ್ಲಿ ಸಮಾನತೆ ತಿರುಳು

**ಪ್ರೊ. ಬಿ.ಆರ್. ರಾಜು**

**ಸಾರಾಂಶ**

ಬಸವಣ್ಣನವರ ಕಾಲದಲ್ಲಿ ಕಂಡುಬರುವ ಸಾಮಾಜಿಕ ಅಸಮಾನತೆ ಅನಿಷ್ಟ ಜಾತಿ ಪದ್ಧತಿ ಮೂಢನಂಬಿಕೆಗಳು ಸ್ತ್ರೀಯರಿಗೆ ಸ್ವಾತಂತ್ರ್ಯ ಇಲ್ಲದಿರುವುದು ರಾಜಕೀಯ ಸ್ಥಿರತೆ ಆರ್ಥಿಕ ಅಸಮಾನತೆ ಹಾಗೂ ಧಾರ್ಮಿಕ ಕ್ಷೇತ್ರದಲ್ಲಿ ವರ್ಗದವರಿಗೆ ಹೆಚ್ಚಿನ ಅವಕಾಶವಿಲ್ಲದಿರುವುದು ಕಂಡ ಬಸವಣ್ಣನವರು ಹೊಸ ಸಮಾಜವನ್ನು ನಿರ್ಮಿಸುವುದರ ಮೂಲಕ ಸಮಾನತೆಯನ್ನು ತರಲು ಪ್ರಯತ್ನಿಸಿದರು. ಸಮಾಜದ ಪ್ರತಿ ಹಂತದಲ್ಲಿ ತನ್ನದೇ ಆದ ವಿಚಾರಗಳ ಮೂಲಕ ಕ್ರಾಂತಿ ಮಾಡಿ ಸಮಾಜದ ಅಡಿಪಾಯ ಹಾಕಿದರು ಸಂಪ್ರದಾಯವನ್ನು ತಮ್ಮ ವಚನಗಳ ಮೂಲಕ ವೈಚಾರಿಕ ವಿಚಾರಗಳಿಂದ ಸಮಾಜಕ್ಕೆ ಹೊಸ ಬೆಳಕನ್ನು ತಂದುಕೊಟ್ಟು ಹೊಸ ಸಮಾಜವನ್ನು ಕಟ್ಟಿ ಇಡೀ ಮಾನವಕುಲಕ್ಕೆ ಆದರ್ಶಪ್ರಾಯರಾಗಿದ್ದಾರೆ ಇವರ ಮೂಲ ಉದ್ದೇಶವು ನಾವು ಬಾಳಬೇಕು ಸಮಾಜ ಉಳಿಯಬೇಕು ತಮ್ಮ ಸಾಮಾಜಿಕ ಬದುಕು ಕಟ್ಟಿಕೊಳ್ಳಲು ಬೇಕಾದಂತಹ ಪರಿಸರವನ್ನು ಅವರು ಸಮಾಜಕ್ಕೆ ಒದಗಿಸಿದರು ಅಂತ ಹಲವಾರು ದೃಷ್ಟಿಕೋನವನ್ನು ಅವರ ವಚನಗಳಲ್ಲಿ ಕಾಣಬಹುದು.

**ಪ್ರಮುಖ ಪದಗಳು:** ಬಸವಣ್ಣನವರ ವಚನಗಳು, ಸಾಮಾಜಿಕ ಆರ್ಥಿಕ ಧಾರ್ಮಿಕ ನೈತಿಕ ರಾಜಕೀಯ ಪ್ರಗತಿಪರ ನಡೆನುಡಿ ಮಾನವೀಯತೆ ಮೂಢನಂಬಿಕೆ, ಶೋಷಣೆ, ಕಾಯಕ, ದಾಸೋಹ.

## ಪ್ರಸ್ತಾವನೆ

12ನೇ ಶತಮಾನದ ಅಣ್ಣ ಬಸವಣ್ಣ ತಮ್ಮ ಕಾಲವನ್ನು ಮೀರಿ 21ನೇ ಶತಮಾನದ ವಿಚಾರಗಳನ್ನು ಹೊಂದಿದ್ದು ಆತನ ದೂರದೃಷ್ಟಿ ಸಾಕ್ಷಿಯಾಗಿದೆ ಬಸವಣ್ಣನವರ ವಿಚಾರಗಳು ಕರ್ನಾಟಕದಲ್ಲಷ್ಟೇ ಅಲ್ಲ ಜಾಗತಿಕ ಮಟ್ಟದಲ್ಲಿ ನೈಸರ್ಗಿಕವಾಗಿ ಏನೇ ಇದ್ದರೂ ಬದುಕಿನ ವಿವಿಧ ಸ್ತರಗಳಲ್ಲಿ ಪ್ರತಿಯೊಬ್ಬರು ಸಮಾನರು ಎಂಬ ವಿಚಾರವನ್ನು ಜಗತ್ತಿಗೆ ಬಸವಣ್ಣನವರು ಆ ಕಾಲದಲ್ಲಿ ಎದ್ದು ಕಾಣುವ ಮಹಾನ್ ವ್ಯಕ್ತಿಯಾಗಿ ಚಳುವಳಿಯನ್ನು ಹುಟ್ಟು ಹಾಕುವುದಕ್ಕಿಂತ

Corresponding Author:
**ಪ್ರೊ. ಬಿ.ಆರ್. ರಾಜು**
ಸಹಾಯಕ ಪ್ರಾಧ್ಯಾಪಕರು
ಕನ್ನಡ ವಿಭಾಗ ಗೋಖಲೆ
ಸೆಂಟೆನರಿ ಕಾಲೇಜು,
ಅಂಕೋಲಾ, ಉತ್ತರ ಕನ್ನಡ

ಪೂರ್ವದಲ್ಲಿ ಧಾರ್ಮಿಕ ಆರ್ಥಿಕ ಕ್ಷೇತ್ರಗಳಲ್ಲಿ ಅಸಮಾನತೆ ತುಂಬಿತ್ತು ಜಾತಿಪದ್ಧತಿ ಕೆಳವರ್ಗದವರಲ್ಲಿ ಉಸಿರುಗಟ್ಟಿಸುತ್ತಿತ್ತು ಮುಂದೆ ಇದೇ ಜಾತಿ ವರ್ಗವಾಗಿ ಪರಿಣಮಿಸಿ ಮೇಲು-ಕೀಳು ಎಂಬ ಭಾವನೆ ಮೂಡಿಸಿತು ಇಂತಹ ಹೀನಾಯ ಸ್ಥಿತಿಯಲ್ಲಿದ್ದ ಕೆಳವರ್ಗದವರ ಧಾರ್ಮಿಕ ಬದುಕು ತುಂಬಾ ದುಸ್ಥಿತಿಯಲ್ಲಿದ್ದು ಅಜ್ಞಾನ ಮೂಢನಂಬಿಕೆ ಮತ್ತು ಕನಿಷ್ಠ ಆಚರಣೆಗಳ ಮೂಲಕ ಜನಸಾಮಾನ್ಯರ ಬದುಕು ನೆಲಕಚ್ಚಿ ಹೋಗಿದ್ದಕ್ಕೆ ಬಸವಣ್ಣ ನಾಡಿನಲ್ಲಿ ಇಂತಹ ವರ್ಗಕ್ಕೆ ಬಸವಣ್ಣನ ವಿರೂಪವಾಗಿ ಜಗವಿಲ್ಲ ನಿದ್ರಿಸುವಾಗ ಎಚ್ಚೆತ್ತು ಸಮಾನತೆಯ ಆಶಾ ದೀವಿಗೆಯನ್ನು ಹಿಡಿದು ಸಮಾನತೆಯ ಕಹಳೆಯನ್ನು ಊದಿದರು ಸಾಮಾಜಿಕ ಸಮಾನತೆ ಸಕಲ ಜೀವಿಗಳಿಗೆ ಬಯಸುವ ಬಸವಣ್ಣನವರು ಮಾನವರಲ್ಲಿ ಸಮಾನತೆ ಕಾಣುವುದರಲ್ಲಿ ಅಚ್ಚರಿಯೇನಿಲ್ಲ ಇವರು ಸಮಾನತೆಯ ಮೇಲೆ ನವಸಮಾಜ ಕಟ್ಟಿದರು ಜಿಡ್ಡುಗಟ್ಟಿದ ಆ ಕಾಲದಲ್ಲಿ ಪ್ರಗತಿಪರ ವಿಚಾರಗಳನ್ನು ಬಿತ್ತಿ ಬೆಳೆಸುವುದರಲ್ಲಿ ಆತನ ಮಾನವೀಯತೆಯನ್ನು ಇಲ್ಲಿ ಕಾಣಬಹುದು ಆತನ ನಡೆನುಡಿ ಕೂಡ ಒಂದೇ ಆಗಿದ್ದವು

**ಬಸವಣ್ಣನವರ ಸಾಮಾಜಿಕ ಸಮಾನತೆ**

ಇವನಾರವ ಇವನಾರವ ಇವನಾರವ ನೆಂದೆನಿಸದಿರಯ್ಯಾ
ಇವ ನಮ್ಮವ ಇವ ನಮ್ಮವ ಇವ ನಮ್ಮವ ನೆಂದೆನಿಸಯ್ಯಾ
ಕೂಡಲಸಂಗಮದೇವಾ ನಿಮ್ಮ ಮಹಾಮನೆಯ ಮಗನೆಂದೆನಿಸಯ್ಯ.

- ಶೂದ್ರರಾದ ರೈತಾಪಿ ಜನರು, ಕಾಯಕಜೀವಿಗಳು, ಮಹಿಳೆಯರು ಮತ್ತು ಪಂಚಮರು ಈ ದೇಶದಲ್ಲಿ ಸಹಸ್ರಾರು ವರ್ಷಗಳಿಂದ ಮನುಧರ್ಮದ ಪುರುಷ ಪ್ರಧಾನವಾದ ವರ್ಣ ವ್ಯವಸ್ಥೆಯಿಂದಾಗಿ ಪಡಬಾರದ ಕಷ್ಟಪಟ್ಟಿದ್ದಾರೆ. ಮೇಲ್ವರ್ಗ ಮತ್ತು ಮೇಲ್ಜಾತಿಯ ಅನುತ್ಪಾದಕ ಪುರುಷರಿಗಾಗಿಯೇ ಬದುಕಿನ ಎಲ್ಲ ಸುಖಭೋಗಗಳು ಮೀಸಲಾಗಿದ್ದವು. ಇವರು ಮಾತ್ರ ಜನಿವಾರ ಧರಿಸುವ ಹಕ್ಕನ್ನು ಪಡೆದಿದ್ದರು.
- ಜನಿವಾರ ಧರಿಸುವ ಬ್ರಾಹಣ ಓದಿರಬಹುದು, ಬರೆದಿರಬಹುದು ಆದರೆ ಕಾಯಕಜೀವಿಯಾಗಿ ಉತ್ಪಾದನೆಯಲ್ಲಿ ತೊಡಗಿಲ್ಲ. ಉತ್ಪಾದನೆಯ ಅನುಭವದಿಂದ ಬರುವ ಜ್ಞಾನವನ್ನು ಹಿಂದಿನ ಕಾಲದಲ್ಲಿ ಅವನೆಂದೂ ಪಡೆಯಲಿಲ್ಲ. ಕ್ಷತ್ರಿಯ ಕಾದಿರಬಹುದು ಆದರೆ ಉತ್ಪಾದನೆಯಲ್ಲಿ ತೊಡಗಲಿಲ್ಲ. ವೈಶ್ಯ ವಸ್ತುಗಳ ಮಾರಾಟ ಮಾಡಿರಬಹುದು, ಕೃಷಿಭೂಮಿಯ ಒಡೆಯನೂ ಆಗಿರಬಹುದು ಆದರೆ ಸ್ವತಃ ಉತ್ಪಾದನೆ ಮಾಡಲಿಲ್ಲ. ಈ ಮೂರೂ ವರ್ಣದವರಿಗೂ ಜನಿವಾರ ಇದೆ.
- ಆದರೆ ಉತ್ಪಾದನೆಯಲ್ಲಿ ತೊಡಗಿದ ಕಾಯಕ ಜೀವಿಗಳಿಗೆ ಮತ್ತು ಪಂಚಮರಿಗೆ ಜನಿವಾರ ಇಲ್ಲ. ಯಾರಿಗೆ ಜನಿವಾರ ಇತ್ತೋ ಅವರು ದುಡಿಯದೆ ಸುಖ ಜೀವನವನ್ನು ಅನುಭವಿಸಿದರು. ಯಾರಿಗೆ ಜನಿವಾರ ಇದ್ದಿದ್ದಿಲ್ಲವೂ ಅವರು ದುಡಿದೂ ಕಷ್ಟ ಜೀವನವನ್ನು ಅನುಭವಿಸಿದರು. ಅಂತೆಯೆ ಬಸವಣ್ಣನವರು ಕಟ್ಟ ಕಡೆಗೆ ಮನುಷ್ಯನ ಕಡೆಗೆ ಬಂದರು ಈ ಅನ್ಯಾಯದ ವಿರುದ್ಧ ಸಿಡಿದೆದ್ದರು.
- "ಜಾತಿ ಸಂಕರವಾದ ಬಳಿಕ ಕುಲವನರಸುವರೆ ?" ಎಂದು ಪ್ರಶ್ನಿಸಿ ಕಾಯಕಜೀವಿಗಳ ಕೇಂದ್ರಿತ ಶರಣ ಸಂಕುಲವನ್ನು ಸೃಷ್ಟಿಸಿದರು. ವಿವಿಧ ಕಾಯಕಗಳ ಶೂದ್ರರಿಗೆ, ಮಹಿಳೆಯರಿಗೆ ಮತ್ತು ಪಂಚಮರಿಗೆ ಮೊದಲ ಬಾರಿಗೆ ಶಿಕ್ಷಣ ನೀಡುವ ವ್ಯವಸ್ಥೆ ಮಾಡಿದರು. ಅವರೆಲ್ಲ ಅನುಭವ ಮಂಟಪದಲ್ಲಿ ತಮ್ಮ ಅನುಭವಗಳನ್ನು ಹಂಚಿಕೊಂಡರು.
- ಭಾರತದಲ್ಲಿ ವಿವಿಧ ಜಾತಿಗಳ ಕಾಯಕಜೀವಿಗಳು ಮೊದಲ ಬಾರಿಗೆ ಜಾತಿಯನ್ನು ಮೀರಿ ಒಂದು ವರ್ಗವಾಗಿದ್ದು ಶರಣ ಸಂಕುಲದಲ್ಲಿ ಎಂಬುದು ಹೆಮ್ಮೆಯ ವಿಚಾರವಾಗಿದೆ. ಅವರೆಲ್ಲ ತಮ್ಮ ಕಾಯಕಗಳ ಹೆಸರುಗಳನ್ನು ಅಭಿಮಾನದಿಂದ ಉಳಿಸಿಕೊಂಡರು. ಆದರೆ ಆ ಕಾಯಕಗಳ ಒಳಗೆ ಇದ್ದ ಜಾತಿ ವಿಷವನ್ನು ಹೊರ ಹಾಕಿದರು. ಹೀಗೆ ಶರಣರಲ್ಲಿ ಸಮಗಾರ, ಮಾದಾರ, ಮೇದಾರ, ಡೋಹರ, ಅಂಬಿಗ ಮುಂತಾದ ಪದಗಳು ಜಾತಿ ಸೂತಕವನ್ನು ಕಳೆದುಕೊಂಡು ಕಾಯಕ ಸೂಚಕಗಳಾಗಿ ಉಳಿದವು.

**ಬಸವಣ್ಣನವರ ಧಾರ್ಮಿಕ ಸಮಾನತೆ**

ಬಸವೇಶ್ವರರು ಹನ್ನೆರಡು ವರ್ಷಗಳ ಕಾಲ ಕೂಡಲ ಸಂಗಮದಲ್ಲಿ ಅಧ್ಯಯನ ಮಾಡುತ್ತಾ ಕಳೆದರು. ಅವರ ದೃಷ್ಟಿಯಲ್ಲಿ ದೇವನು ಒಬ್ಬ ಮತ್ತು ಅವನು

ಮಾನವನಲ್ಲಿದ್ದಾನೆಯೇ ಹೊರತು ಗುಡಿ-ಗುಂಡಾರಗಳಲ್ಲಿ ಅಲ್ಲ. ಕೆಲಸ ಮಾಡಿ ಜೀವನ ನಡೆಸಬೇಕು, ಆಲಸಿ ಜೀವನ ಸಲ್ಲ. ಸುಳ್ಳು ಹೇಳುವುದು, ವಂಚಿಸುವುದು, ಕೊಲೆ-ಸುಲಿಗೆ ಮಾಡುವುದು, ಪ್ರಾಣಿಬಲಿ ನೀಡುವುದು, ಪರಧನ ಹರಣ, ಪರಸ್ತ್ರೀ ವ್ಯಾಮೋಹ ಹೊಂದುವುದು ಘೋರ ಅಪರಾಧ. ಕೆಲಸದಲ್ಲಿ ಮೇಲು ಅಥವಾ ಕೀಳು ಎಂಬುದಿಲ್ಲ. ಪುರುಷನಂತೆ ಮಹಿಳೆಗೂ ವಿದ್ಯಾಭ್ಯಾಸದ ಮತ್ತು ತನ್ನ ಜೀವನವನ್ನು ರೂಪಿಸಿಕೊಳ್ಳುವ ಹಕ್ಕಿದೆ. ಹೀಗೆ ಸಮಾನತೆ, ಕಾಯಕ, ದಾಸೋಹ ತತ್ವಗಳನ್ನು ಸ್ವೀಕರಿಸುವ ಮತ್ತು ಆಚರಿಸುವ ಯಾರು ಬೇಕಾದರೂ ಶಿವಶರಣರಾಗ ಬಹುದು ಎಂದು ಬಸವಣ್ಣವರು ಸಾರಿದರು. ಪೊಳ್ಳು ದೇವರುಗಳನ್ನು ಸ್ತುತಿಸುತ್ತಿದ್ದ ಮತ್ತು ಪುರೋಹಿತಶಾಹಿಯಿಂದ ನಿರಂತರವಾಗಿ ವಂಚನೆಗೊಳಗಾಗುತ್ತಿದ್ದ ಜನತೆಗೆ ಬಸವಣ್ಣನವರು ಹೊಸ ಜೀವನ ನೀಡಿದರು.

ಜಾತಿ, ಮತ, ಲಿಂಗಗಳ ಭೇದವನ್ನು ತಿರಸ್ಕರಿಸಿದ ಬಸವಣ್ಣನವರು ಸಾಮಾಜಿಕ ಕ್ರಾಂತಿಗೆ ಕಾರಣವಾದರು. ಬಸವಣ್ಣನವರನ್ನು ಜಗಜ್ಯೋತಿ ಬಸವೇಶ್ವರ, ಕ್ರಾಂತಿಯೋಗಿ ಬಸವಣ್ಣ, ಭಕ್ತಿ ಭಂಡಾರಿ ಬಸವಣ್ಣ, ಮಹಾ ಮಾನವತಾ ವಾದಿ ಎಂದೂ ಕರೆಯಲಾಗುತ್ತದೆ. ಮಾನವಿಯತೆ. ಕಾಯಕ ನಿಷ್ಠೆ ಧರ್ಮದ ಬುನಾದಿಯಾಗಬೇಕು ಎಂದು ಬಲವಾಗಿ ನಂಬಿದ್ದರು. ಬಸವಣ್ಣ ತಮ್ಮ ವಚನಗಳ ಮೂಲಕ ಕಾಯಕವೇ ಕೈಲಾಸ, ದಯವೇ ಧರ್ಮದ ಮೂಲವಯ್ಯ, ಅಯ್ಯ ಎಂದರೆ ಸ್ವರ್ಗ ಎಲವೂ ಎಂದರೆ ನರಕ ಎಂದು ಸಾರುವ ಮೂಲಕ ತಮ್ಮ ಮಾನವಾತಾ ವಾದಕ್ಕೆ ಸಾಹಿತ್ಯದ ಸ್ಪರ್ಶ ನೀಡಿದರು. ಕನ್ನಡ ಸಾಹಿತ್ಯಕ್ಕೆ ವಚನಗಳ ಮೂಲಕ ಅಪೂರ್ವ ಕೊಡುಗೆ ಅಪಾರ ಇದುವರೆಗೆ ಸುಮಾರು 1500 ವಚನಗಳನ್ನು ಸಂಗ್ರಹಿಸಿಡಲಾಗಿದೆ.

ಬಸವಣ್ಣನವರ ಪ್ರೇರಣೆಯಿಂದ ಹರಿಜನ ಮತ್ತು ಬ್ರಾಹ್ಮಣ ಕುಟುಂಬಗಳ ನಡುವೆ ನಡೆದ ಅನುಲೋಮ ವಿವಾಹ ಕಲ್ಯಾಣದ ಕ್ರಾಂತಿಗೆ ಮುನ್ನುಡಿಯಾಯಿತು. ಇವರು ಷಟ್ ಸ್ಥಲ ವಚನ, ಕಾಲಜ್ಞಾನ ವಚನ, ಮಂತ್ರಗೋಪ್ಯ, ಶಿಖಾರತ್ನ ವಚನ ಎಂಬ ಗ್ರಂಥಗಳನ್ನು ಬರೆದಿದ್ದಾರೆ. ಇವರನ್ನು ಕುರಿತಂತೆ ಕನ್ನಡ, ತೆಲುಗು, ಸಂಸ್ಕೃತ, ತಮಿಳು, ಮರಾಠಿ ಮತ್ತು ಹಿಂದಿ ಭಾಷೆಗಳಲ್ಲಿ ಪುರಾಣಗಳು ರಚನೆಯಾಗಿವೆ. ಬಾಗೇವಾಡಿ ಕಪ್ಪಡಿಸಂಗಮ, ಕಲ್ಯಾಣ ಪಟ್ಟಣಗಳಲ್ಲಿ ಇವರ ಸ್ಮಾರಕಗಳಿವೆ. ಬೆಳಗಾವಿ ಜಿಲ್ಲೆಯ ಅರ್ಜುನವಾಡದ ಶಿಲಾಶಾಸನದಲ್ಲಿ ಉಲ್ಲೇಖಿತವಾಗಿರುವ ಸಂಗಣಬಸವ ಎಂಬ ಹೆಸರು ವಚನಕಾರ ಬಸವಣ್ಣನವರದ್ದೇ ಎಂದು ವಿದ್ವಾಂಸರು ಊಹಿಸಿದ್ದಾರೆ. "ನಮನ" (ಪ್ರೊ.ಚಿದಾನಂದ ಮೂರ್ತಿಯವರಂಥ ಹಿರಿಯರೂ ಕೆಲವು ಗೌರವಾನ್ವಿತ ಸಂಪ್ರದಾಯ ಪರಾಯಣ ಮಠಾಧಿಪತಿಗಳೂ ವೀರಶೈವ ಧರ್ಮದ ಪ್ರತ್ಯೇಕ ಅಸ್ತಿತ್ವವನ್ನೊಪ್ಪದೆ ಅದು ಹಿಂದೂ ಧರ್ಮದ ಒಂದು ಭಾಗವೆಂದು ಘಂಟಾಘೋಷವಾಗಿ ಸಾರಿದ್ದಾರೆ.

**ಬಸವಣ್ಣನವರ ಸ್ತ್ರೀ ಸಮಾನತೆ, ನೈತಿಕ ಸಮಾನತೆ, ಆರ್ಥಿಕ ಸಮಾನತೆ, ರಾಜಕೀಯ ಸಮಾನತೆ**

ಕರ್ನಾಟಕದ ಇತಿಹಾಸದಲ್ಲಿ ಹನ್ನೆರಡನೆಯ ಶತಮಾನ ಒಂದು ವಿಶಿಷ್ಟವಾದ ಕಾಲಘಟ್ಟ. ಜಡ್ಡು ಹಿಡಿದಿದ್ದ ಸಮಾಜಕ್ಕೆ ವೈಚಾರಿಕತೆಯ ಸ್ಪರ್ಶ ನೀಡುವ ಮೂಲಕ ಒಂದು ಹೊಸ ಸಮಾಜದ ಸೃಷ್ಟಿಯ ಕನಸನ್ನು ಕಂಡಂತಹ ಶರಣರು, ಬಸವಣ್ಣನವರ ನೇತೃತ್ವದಲ್ಲಿ ನಡೆಸಿದಂತಹ ಕ್ರಾಂತಿ ಅಪೂರ್ವವಾದುದು. ಬಸವಣ್ಣನವರ ಸಾರಥ್ಯದಲ್ಲಿ ನಡೆದ ಸುಧಾರಣೆಯ ಪ್ರಯತ್ನ ಒಂದು ಸಾಮಾಜಿಕ ಚಳವಳಿಯಾಗಿ ರೂಪುಗೊಂಡು ಸಾಮಾನ್ಯ ಬದುಕಿನ ಎಲ್ಲಾ ಸ್ತರಗಳು ಆ ಚಳವಳಿಯ ಒಂದು ಭಾಗವಾದದ್ದು ಶರಣರ ಪೂರ್ಣದೃಷ್ಟಿಯ ಸಂಕೇತ. ಜಾತ್ಯತೀತ ಸಮಾಜ ಕಲ್ಪನೆ ಬಸವಣ್ಣನವರ ಕಣ್ಣಿಗೆ ಮೊದಲು ಬಿದ್ದದ್ದು ಅಂದಿನ ಸಮಾಜದಲ್ಲಿನ ಜಾತೀಯ ವಿಷಮತೆ. ಜಾತಿಯ ಹೆಸರಿನಲ್ಲಿ ನಡೆಯುತ್ತಿದ್ದ ಶೋಷಣೆ, ದಲಿತರ ಮೇಲೆ ನಡೆಯುತ್ತಿದ್ದ ಕ್ರೌರ್ಯ ಬಸವಣ್ಣನವರ ಮನಸ್ಸನ್ನು ತುಂಬಾ ಘಾಸಿಗೊಳಿಸಿತು. ಇದರಿಂದಾಗಿ ಬಸವಾದಿಶರಣರು ಇಡೀ ಜಾತಿ ವ್ಯವಸ್ಥೆಯ ವಿರುದ್ಧ ಸೆಟೆದು ನಿಂತರು. ಕೊಲುವವನೆ ಮಾದಿಗ ಹೊಲಸ ತಿಂಬುವವನೆ ಹೊಲೆಯ ಕುಲಯಾವುದೋ ಆವಂದಿರ ಕುಲ ಯಾವುದೋ ಎಂದು ಪ್ರಶ್ನಿಸುವ ಮೂಲಕ 'ಸಕಲ ಜೀವಾತ್ಮರಿಗೆ ಲೇಸನೆ ಬಯಸುವವನು ಕುಲಜನು' ಎಂಬ ವ್ಯಾಖ್ಯಾನ ನೀಡಿದ ಹಿರಿಮೆ ಬಸವಣ್ಣನವರಿಗೆ ಸಲ್ಲುತ್ತದೆ. ಜಾತ್ಯತೀತ ಸಮಾಜದ ಪರಿಕಲ್ಪನೆ ಶರಣರ ಬಹುದೊಡ್ಡ ಕಾಣಿಕೆ.

ಕಾಯಕ-ದಾಸೋಹ ಸಿದ್ಧಾಂತ: ಬಸವಣ್ಣನವರು ಪ್ರತಿಪಾದಿಸಿದ ಕಾಯಕ-ದಾಸೋಹ ಸೂತ್ರ ಒಂದು

ವಿನೂತನವಾದ ಆರ್ಥಿಕ ಸಿದ್ಧಾಂತಕ್ಕೆ ನಾಂದಿಯಾಯಿತು. ಕಾಯಕ ಸಂಸ್ಕೃತಿಯ ಪ್ರತಿಪಾದಕರಾದ ಶರಣರು 'ಗುರುಲಿಂಗ ಜಂಗಮವಾದರೂ ಕಾಯಕದಿಂದಲೇ ಮುಕ್ತಿ' ಎಂಬ ಸಂದೇಶ ನೀಡಿ ಬೆವರಿನ ಹಾಗೂ ಶ್ರಮ ಸಂಸ್ಕೃತಿಯ ಪ್ರತಿಪಾದಕರಾದರು. ಅಲ್ಲದೆ, ನಾವು ಮಾಡುವ ಕಾಯಕ ಸತ್ಯಶುದ್ಧವಾಗಿರಬೇಕು ಎಂದು ಹೇಳುವ ಮೂಲಕ ಕಾಯಕಕ್ಕೆ ನೈತಿಕ ಮೌಲ್ಯ ನೀಡಿದವರು ಬಸವಾದಿ ಶರಣರು. ಶರಣ ಸಂಸ್ಕೃತಿಯಲ್ಲಿ ಸೋಮಾರಿಗಳಿಗೆ ಸ್ಥಾನವೇ ಇಲ್ಲ. ದುಡಿಮೆಯಿಲ್ಲದೆ ಸಂಪತ್ತು ಗಳಿಸಬೇಕೆಂಬ ಇಂದಿನ ಸಮಾಜಕ್ಕೆ ಕಾಯಕವೇ ಕೈಲಾಸ ಎಂಬ ಸಂದೇಶ ಎಂದೆಂದೂ ಅನ್ವಯವಾಗುವ ಒಂದು ದಿವ್ಯ ಸಂದೇಶವಾಗಿದೆ. ವ್ಯಕ್ತಿ ತಾನು ಕಾಯಕದಿಂದ ಗಳಿಸುವ ಸಂಪತ್ತನ್ನು ತಾನೊಬ್ಬನೇ ಅನುಭವಿಸಬೇಕೆಂಬ ತತ್ವವನ್ನು ನಿರಾಕರಿಸಿದರು. ತನ್ನ ಗಳಿಕೆಯಲ್ಲಿ ಸಮಾಜದ ಪಾತ್ರವೂ ಇರುವುದರಿಂದ ಅದು ಸಮಾಜಕ್ಕೆ ವಿನಿಯೋಗ ಆಗಬೇಕೆಂಬ ಒಂದು ವಿಶಿಷ್ಟ ದಾಸೋಹ ಸೂತ್ರ ಪ್ರತಿಪಾದನೆ ಮಾಡಿದವರು ಬಸವಾದಿ ಶರಣರು. ಹಂಚಿಕೊಂಡು ತಿನ್ನುವುದು ಶರಣ ಧರ್ಮ. ಹಂಚಿಕೊಂಡು ತಿನ್ನುವ ಗುಣ ಪ್ರಾಣಿಪಕ್ಷಿಗಳಲ್ಲಿ ಕಾಣುವ ಬಸವಣ್ಣನವರಿಗೆ ಮತ್ತೊಬ್ಬರಿಂದ ಕಸಿದುಕೊಂಡು ತಿನ್ನುವ ಮನುಷ್ಯನನ್ನು ನೋಡಿದಾಗ ನೋವಾಗುತ್ತದೆ. ಅವರ ಈ ವಚನ ಇದಕ್ಕೆ ಸಾಕ್ಷಿಯಾಗಿದೆ.

ಕಾಗೆ ಒಂದಗುಳ ಕಂಡೊಡೆ ಕರೆಯದೆ ತನ್ನ ಬಳಗವನು
ಕೋಳಿ ಒಂದು ಕುಟುಕ ಕಂಡಡೆ ಕೂಗಿ ಕರೆಯದೆ ತನ್ನ
ಕುಲವನೆಲ್ಲವ ಶಿವಭಕ್ತನಾಗಿ ಭಕ್ತಿಪಕ್ಷವಿಲ್ಲದಿದ್ದಡೆ ಕಾಗೆ
ಕೋಳಿಯಿಂದ ಕರಕಷ್ಟ.
ಕೂಡಲಸಂಗಮದೇವಾ.

**ಸ್ತ್ರೀ ಸಮಾನತೆ:** ಶತಶತಮಾನಗಳಿಂದ ಶೋಷಣೆಗೆ ಒಳಪಟ್ಟಿದ್ದ ಸ್ತ್ರೀಸಮುದಾಯದ ಧ್ವನಿಯಾದವರು ಬಸವಾದಿ ಶರಣರು. ಹೆಣ್ಣು ಮಾಯೆಯಲ್ಲ ಎಂದು ಪ್ರತಿಪಾದಿಸುತ್ತಾ ಲಿಂಗಬೇಧದ ವಿರುದ್ಧ ಸಿಡಿದೇಳುವ ಮೂಲಕ ಸ್ತ್ರೀ ಸ್ವಾತಂತ್ರ್ಯ ಪ್ರತಿಪಾದನೆ ಮಾಡಿದವರು ಬಸವಣ್ಣನವರು. ಹೆಣ್ಣು ಗಂಡು ಎನ್ನುವ ಕಲ್ಪನೆ ಕೇವಲ ದೇಹಕ್ಕೆ ಮಾತ್ರವೇ ವಿನಃ ಆತ್ಮಕ್ಕೆ ಅಲ್ಲ ಎಂಬ ವಿಶಿಷ್ಟ ಕಲ್ಪನೆ ನೀಡಿದ ಹಿರಿಮೆ ಬಸವಾದಿ ಶರಣರಿಗೆ ಸಲ್ಲುತ್ತದೆ. ಬಸವಣ್ಣನವರ ದಿವ್ಯ ನೇತೃತ್ವದಲ್ಲಿ ನಡೆದ ಸಮಗ್ರ ಕ್ರಾಂತಿಯ ಸ್ವರೂಪವನ್ನು ಅರ್ಥೈಸಬೇಕಾದರೆ ಅವರು ಹಾಗೂ ಅವರ ಸಮಕಾಲೀನ ಶರಣರು ರಚಿಸಿದ ವಚನ ಸಾಹಿತ್ಯಕ್ಕೆ ನಾವು ಮೊರೆ ಹೋಗಬೇಕಾಗುತ್ತದೆ. ಏಕೆಂದರೆ ಶರಣರು ನಡೆಸಿದ ಕ್ರಾಂತಿಗೆ ವಚನಸಾಹಿತ್ಯವೇ ನೀತಿಸಂಹಿತೆ. ಅದೇ ಅವರ ಹೋರಾಟದ ಸಂವಿಧಾನ. ವಚನ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಹೊಸ ರೂಪ ತಂದು ಕೊಟ್ಟಂತಹ ಅನುಭಾವ ಸಾಹಿತ್ಯ. ವಚನ ಸಾಹಿತ್ಯದ ರಚನೆ, ಶರಣರ ಮೂಲ ಉದ್ದೇಶವಾಗಿರಲಿಲ್ಲ. ಅದು ಅವರ ನಿರಂತರ ಜೀವನಾನುಭವದಿಂದ ಹುಟ್ಟಿಕೊಂಡ ಅಂತರಂಗದ ಸಹಜ ಅಭಿವ್ಯಕ್ತಿ. ಶರಣರ ಬದುಕಿನ ಅನುಸಂಧಾನದ ಹಾದಿಯಲ್ಲಿ ಅವರ ಅನುಭಾವದ ಮೂಸೆಯಲ್ಲಿ ಅರಳಿದ ಅನನ್ಯ ಜ್ಞಾನರತ್ನವೇ ವಚನಗಳು. ವಚನ ಸಾಹಿತ್ಯದ ಮೂಲ ಆಶಯ ವ್ಯಕ್ತಿಯ ಕಲ್ಯಾಣದೊಂದಿಗೆ ಲೋಕಕಲ್ಯಾಣದ ಸಾಧನೆ.

ವಚನ ಸಾಹಿತ್ಯದ ಉಗಮಸ್ಥಾನವೇ ಅನುಭವ ಮಂಟಪ. ವಿಶ್ವದ ಪ್ರಪ್ರಥಮ ಪಾರ್ಲಿಮೆಂಟ್ ಎಂಬ ಹೆಗ್ಗಳಿಕೆಗೆ ಪಾತ್ರವಾದ ಅನುಭವ ಮಂಟಪ ಶರಣರ ತತ್ವಚಿಂತನೆಗೆ ಒಂದು ವೇದಿಕೆಯಾಯಿತು. ಲಿಂಗಬೇಧವಿಲ್ಲದೆ, ವರ್ಣಬೇಧವಿಲ್ಲದೆ ಎಲ್ಲ ಶರಣರು ಒಂದೆಡೆ ಸೇರಿ ತಮ್ಮ ವಿಚಾರಗಳನ್ನು ಅಭಿವ್ಯಕ್ತಿಗೊಳಿಸುವ ಇತರರ ವಿಚಾರಗಳನ್ನು ಹಂಚಿಕೊಳ್ಳುವ ಒಂದು ವಿಚಾರ ದಾಸೋಹದ ಕೇಂದ್ರವಾಯಿತು ಅನುಭವಮಂಟಪ.

ದಯೆಯೆ ಧರ್ಮದ ಮೂಲವಯ್ಯ
ದಯೆಯಿಲ್ಲದ ಧರ್ಮ ಯಾವುದಯ್ಯ
ದಯೆ ಬೇಕು ಸಕಲ ಪ್ರಾಣಿಗಳೆಲ್ಲರಲಿ
ದಯೆಯೆ ಧರ್ಮದ ಮೂಲವಯ್ಯ
ಕೂಡಲ ಸಂಗಮದೇವನಂತಲ್ಲದೊಲ್ಲನಯ್ಯಾ.

ಎಂಬ ಬಸವಣ್ಣನವರ ವಾಣಿಯಂತೆ ಶರಣ ಧರ್ಮದ ಮೂಲ ಆಧಾರವೇ ದಯೆ. ಶರಣ ಧರ್ಮದ ಮೂಲ ತಳಹದಿಯೇ ದಯೆ. ಪರಸ್ಪರ ಪ್ರೀತಿ, ಪ್ರೇಮ, ದಯೆಯಂತಹ ಮಾನವೀಯ ಗುಣಗಳಿಂದಾಗಿ ಶರಣರು ಪ್ರತಿಪಾದಿಸಿದ ಧರ್ಮ ಮಾನವ ಧರ್ಮವಾಯಿತು. ಶರಣರು ಕೇವಲ

ಮಾನವರಲ್ಲಿ ಮಾತ್ರ ದಯೆ ತೋರಿದವರಲ್ಲ. ಇಡೀ ಜೀವರಾಶಿಗೆ ದಯೆಯ ಮಳೆಯನ್ನು ಸುರಿಸಿದವರು.

ಶರಣರು ಧಾರ್ಮಿಕ ಚಿಂತನೆ ಉಳ್ಳವರಾಗಿದ್ದರೂ, ಎಂದೂ ಸಹ ಮೂಢನಂಬಿಕೆಗಳನ್ನು ಧರ್ಮದ ಹೆಸರಿನಲ್ಲಿ ಪ್ರೋತ್ಸಾಹಿಸಿದವರಲ್ಲ. ಬದಲಿಗೆ ಮೂಢನಂಬಿಕೆಗಳ ವಿರುದ್ಧ ಸಮರ ಸಾರಿದವರು. ಅವರು ಯಜ್ಞ ಯಾಗಾದಿಗಳನ್ನು ಖಂಡಿಸಿದರು. ವರ, ತಿಥಿ, ನಕ್ಷತ್ರ, ಯೋಗ, ಕರಣ ಹೀಗೆ ಇವುಗಳ ಹೆಸರಿನಲ್ಲಿ ಶೋಷಿಸುವವರ ವಿರುದ್ಧ ಸಿಡಿದು ನಿಂತರು. ವೈಚಾರಿಕ ಚಿಂತನೆಯನ್ನು ಬೋಧಿಸಿದರು.

ಕಲ್ಯಾಣ ಸಮಾಜ ನಿರ್ಮಾಣ: ಶರಣ ಸಂಸ್ಕೃತಿಯ ಮೂಲ ಆಶಯ ಸಮಾನತೆಯ ಸುಂದರ ಕಲ್ಯಾಣ ಸಮಾಜದ ನಿರ್ಮಾಣ. ಅಲ್ಲಿ ವರ್ಗಬೇಧವಿಲ್ಲ, ವರ್ಣಬೇಧವಿಲ್ಲ, ಜಾತಿಬೇಧವಿಲ್ಲ, ದಯೆಯೇ ಧರ್ಮದ ಮೂಲವಾಗಿರುವ ಧರ್ಮಗಳಲ್ಲಿ ಬೇಧಗಳೇ ಇಲ್ಲ. ಮಾನವ ಸಮುದಾಯವನ್ನು ಎಲ್ಲಾ ಅನಿಷ್ಟಗಳಿಂದ ಮುಕ್ತಗೊಳಿಸಿ ಪರಿಪೂರ್ಣತೆಯ ಕಡೆಗೆ ಕೊಂಡೊಯ್ಯುವುದೇ ಶರಣರ ಗುರಿಯಾಗಿತ್ತು, ಹಂಬಲವಾಗಿತ್ತು.

> ಕಳಬೇಡ, ಕೊಲಬೇಡ
> ಹುಸಿಯ ನುಡಿಯಲು ಬೇಡ,
> ಮುನಿಯಬೇಡ, ಅನ್ಯರ ಕಂಡರೆ ಅಸಹ್ಯ ಪಡಬೇಡ
> ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ,
> ಇದೇ ಅಂತರಂಗ ಶುದ್ಧಿ ಇದೇ ಬಹಿರಂಗ ಶುದ್ಧಿ
> ಇದೇ ನಮ್ಮ ಕೂಡಲ ಸಂಗಮದೇವನ ಒಲಿಸುವ ಪರಿ.

ಬಸವಣ್ಣನವರ ಈ ವಚನ ವಿಶ್ವ ಸಮುದಾಯಕ್ಕೆ ನೀಡಿದ ಬಹುದೊಡ್ಡ ನೀತಿಸಂಹಿತೆ. ಶರಣರು ತಮ್ಮ ವಚನಗಳ ಮೂಲಕ ಸ್ವಾಸ್ಥ್ಯ ಸಮಾಜಕ್ಕೆ ಅಗತ್ಯವಾದ ನೀತಿಸೂತ್ರಗಳ ಸಂದೇಶ ನೀಡಿದ್ದಾರೆ. ಶರಣರ ವಚನಗಳು ಮಾನವ ಸಮುದಾಯಕ್ಕೆ ನೀಡಿದ ಜೀವನ ಸಂವಿಧಾನವಿದ್ದಂತೆ. ಭಾರತದ ಸಂವಿಧಾನವನ್ನು ಅಧ್ಯಯನ ಮಾಡಿದಾಗ ಅದರಲ್ಲಿ ಬಸವಣ್ಣನವರು ಪ್ರತಿಪಾದಿಸಿದ ಸಾಮಾಜಿಕ, ಆರ್ಥಿಕ, ನೈತಿಕ ಸೂತ್ರಗಳನ್ನು ಸ್ಪಷ್ಟವಾಗಿ ಕಾಣಬಹುದಾಗಿದೆ. 21ನೆಯ ಶತಮಾನದ ಸಮಾಜದ ಆರ್ಥಿಕ ಅಗತ್ಯಗಳನ್ನು 9ನೆಯ ಶತಮಾನಗಳ ಹಿಂದೆಯೇ ಕಲ್ಪಿಸಿಕೊಂಡಿದ್ದ ಬಸವಣ್ಣನವರು ಮಹಾನ್ ದಾರ್ಶನಿಕರು. ಇಂದಿಗೂ ಬಸವಣ್ಣನವರು ಪ್ರತಿಪಾದಿಸಿದ ಶರಣ ಸಂಸ್ಕೃತಿ ಇಡೀ ವಿಶ್ವಕ್ಕೆ ನೀಡಿದ ಆದರ್ಶ ಮಾನವ ಸಂಸ್ಕೃತಿಯಾಗಿದೆ. ಅವರ ವಚನಗಳು ಸರ್ವಕಾಲಿಕ ಪ್ರಸ್ತುತತೆಯನ್ನು ಹೊಂದಿದೆ.

ಬಸವಣ್ಣನವರು ಕಟ್ಟಬಯಸಿದ ಸಮಾಜ, ಸಾಮಾಜಿಕ, ಆರ್ಥಿಕ ಮತ್ತು ಧಾರ್ಮಿಕ ಸಮಾನತೆಯನ್ನು ಸಾರುವಂತಹ ಆದರ್ಶ ಸಮಾಜ, ವರ್ಣರಹಿತ, ವರ್ಗರಹಿತ, ಜಾತಿರಹಿತ ಸುಂದರ ಸಮಾಜದ ಕಲ್ಪನೆ ಹನ್ನೆರಡನೆಯ ಶತಮಾನದಲ್ಲಿಯೇ ಪ್ರಾಯೋಗಿಕವಾಗಿ ಅನುಷ್ಠಾನಕ್ಕೆ ಬಂದದ್ದು ಅವರ ದೂರದೃಷ್ಟಿಯ ಪ್ರತಿಬಿಂಬ. ಮಾನವೀಯತೆಯ ಸಂಕೇತ. ಸಾಮಾಜಿಕ, ಧಾರ್ಮಿಕ, ಆರ್ಥಿಕ ಚಿಂತನೆಗೆ ಸಾಧನವಾದದ್ದು ಅವರು ರಚಿಸಿದ ಸಾಹಿತ್ಯ. ಶರಣ ಸಾಹಿತ್ಯ ಅನುಭಾವ ಸಾಹಿತ್ಯವಾಗಿ ಭಾಷೆಯನ್ನು ಬೆಳೆಸಿತಲ್ಲದೆ ಮಾನವೀಯ ಮೌಲ್ಯಗಳನ್ನು ಬೆಳೆಸಿತು.

ವಚನ ಸಾಹಿತ್ಯ ವಿಶ್ವದ ಸಾಹಿತ್ಯದ ಸಾಲಿನಲ್ಲಿ ಸರ್ವಕಾಲಿಕವಾಗಿ ಅತ್ಯಂತ ಗಟ್ಟಿಯಾಗಿ ನಿಲ್ಲುವಂತಹ ಪ್ರಜಾಸಾಹಿತ್ಯ, ಪ್ರಗತಿಶೀಲ ಸಾಹಿತ್ಯ. ಎಲ್ಲಕ್ಕಿಂತ ಮಿಗಿಲಾಗಿ ಮಾನವ ಸಮುದಾಯಕ್ಕೆ ದಿಕ್ಕುಗೆಟ್ಟ ಜಗತ್ತಿಗೆ ಜೀವನದರ್ಶನ ಮಾಡಿಸಿದ ಕ್ರಾಂತಿಕಾರಕ ಸಾಹಿತ್ಯ.

ಬಸವಣ್ಣನವರು ಕಂಡ ವರ್ಣರಹಿತ, ಜಾತಿರಹಿತ, ಧಾರ್ಮಿಕ ಸಮಾನತೆಯ ಸಮಾಜ ನಮ್ಮೆಲ್ಲರ ಇಂದಿನ ಆಶಯವಾಗಬೇಕಾಗಿದೆ. ಅತ್ತ ನಮ್ಮೆಲ್ಲರ ಪ್ರಾಮಾಣಿಕ ಪ್ರಯತ್ನ ನಡೆಯಬೇಕಾಗಿದೆ.

ಹೀಗೆ ಹಲವಾರು ಶಿವಶರಣೆಯರು ಮಹಾ ಜ್ಞಾನಿಗಳಾಗಿ ಧರ್ಮ ಸಾರವನ್ನು ಲೋಕಕ್ಕೆ ಕೊಟ್ಟಿರುತ್ತಾರೆ ಸ್ತ್ರೀಯರಿಗೂ ದೀಕ್ಷೆ ಮತ್ತು ಪುರುಷರಿಗೂ ದೀಕ್ಷೆ ಸಾಧನ ಮಾರ್ಗಗಳು ಒಂದು ಸಮಾನವಾದ ಅವಕಾಶವನ್ನು ಕೊಟ್ಟು ಅದರ ಫಲವನ್ನು ಇಲ್ಲಿ ಕಾಣಬಹುದು ಹೆಂಗಸರು ಮಾಯೆಯಿಂದ ಆಗಲಿ ಅವರು ಕೇಳಿದಾಗ ಕೇವಲ ಗುರುತು ನಿರ್ಮಾಣದಲ್ಲಿ ಸಾಮಗ್ರಿಯಿಂದ ಭಾರತವನ್ನು ಉಪದೇಶಿಸಲು ಮಹಾನುಭಾವಿಗಳ ಗೌರವಿಸುತ್ತದೆ ಈ ರೀತಿ ಬಸವಣ್ಣನವರು ಇವರನ್ನು ಸಮಾನತೆಯಿಂದ ಕಂಡು ಅವರಿಗೆ ಸಮಾನ ಅವಕಾಶ ಕಲ್ಪಿಸಿಕೊಟ್ಟಿದ್ದಾರೆ ಹರಿಜನರು ಹೋಗಬೇಕಾಗಿಲ್ಲ

ಅವನ ಕೊರಳಿಗೆ ಗಂಟು ಬಿದ್ದಿರುವ ಶಿವಲಿಂಗ ಮಹತ್ಕಾರ್ಯವನ್ನು ಮಾಡಿದಾಗಿನಿಂದ ಹಿಡಿದು ಅಂತ್ಯದವರೆಗೆ ಬಸವಣ್ಣನ ಸಮಾನ ದೃಷ್ಟಿಯಿಂದ ಕಂಡ ಹರಿಜನರಿಗೂ ಹೆಣ್ಣು ಮಕ್ಕಳಿಗೂ ಸಮಾನ ಧಾರ್ಮಿಕ ಹಕ್ಕುಗಳು ಭಾರತದ ಇತಿಹಾಸದಲ್ಲಿಯೇ ಪ್ರಥಮವಾಗಿದೆ ಪ್ರಾಣಿಬಲಿ, ದವಸ ಧಾನ್ಯದ ನಾಶ ನಿಲ್ಲಿಸಿದ ಭಾರತದ ಇತಿಹಾಸ ಮೂಢನಂಬಿಕೆ, ಸಮಾಜದ ಸುಧಾರಕ ಬಸವಣ್ಣನವರು.

ಒಟ್ಟಾರೆಯಾಗಿ ಶಿಕ್ಷಣ ಕ್ಷೇತ್ರದಲ್ಲಿ ಸಮಾನತೆ ಎಂಬುವುದು ಪ್ರತಿಹಂತದಲ್ಲೂ ನಡೆಯುತ್ತಿದೆ ಎಂದರೆ ಶಾಲೆಗಳಲ್ಲಿ ಸಹಭೋಜನ ಸಮವಸ್ತ್ರ ಶಿಕ್ಷಣ ವಿದ್ಯಾರ್ಥಿಗಳಿಗೆ ಸಹಾಯ ಮಾಡುವ ಮಾನವೀಯ ಮೌಲ್ಯಗಳ ಅಳವಡಿಕೆ ಹಣದ ಮಹತ್ವ ಶಾಲಾ ಸಂಸತ್ ಮೂಲಕ ಸರ್ವರಿಗೂ ಸಮಾನ ಅವಕಾಶಗಳನ್ನು ಹಿಂದಿನ ಶಾಲಾಶಿಕ್ಷಣದಲ್ಲಿ ಅಳವಡಿಸಿಕೊಳ್ಳಲಾಗಿದೆ ಅಭೂತಪೂರ್ವವಾದ ಅಂಶಗಳನ್ನು ಬಸವಣ್ಣನವರ ವಚನಗಳಲ್ಲಿ ಕಾಣಬಹುದಾಗಿದೆ.

ಶೈಕ್ಷಣಿಕ ನಿಹಿತಾರ್ಥಗಳು

ಪ್ರಚಲಿತ ಶಿಕ್ಷಣದಲ್ಲಿ ಸಹ ಭೋಜನ ಸಮವಸ್ತ್ರ ಮುಂತಾದವುಗಳನ್ನು ನೀಡುವ ಮೂಲಕ ಸರ್ವ ಮಕ್ಕಳ ಸಾಮಾಜಿಕ ಸಮಾನತೆ ತರಲಾಗಿದೆ ಸಂವಿಧಾನದಲ್ಲಿ ಕಾನೂನುಗಳ ಮೂಲಕ ಸ್ಥಳೀಯರಿಗೆ ಮೀಸಲಾತಿ ನೀಡುವುದರ ಮೂಲಕ ಶಿಕ್ಷಣದ ಜೊತೆಗೆ ಸ್ತ್ರೀ ಸಮಾನತೆ ತರಲಾಗಿದೆ ಸಕಲ ಜೀವಿಗಳಿಗೆ ಕಬಳಿಸುವ ಮೂಲಕ ಪ್ರತಿಯೊಬ್ಬರನ್ನು ಮಾಡುವುದರ ಮೂಲಕ ಧಾರ್ಮಿಕ ಸಮಾನತೆಗೆ ಬದಲಾಗಿದೆ ಮಕ್ಕಳಲ್ಲಿ ಮಾನವೀಯ ಮೌಲ್ಯಗಳನ್ನು ಬಳಸಿಕೊಳ್ಳುವುದು .

## ಉಪಸಂಹಾರ

ಸ್ವಾತಂತ್ರ್ಯ-ಸಮಾನತೆ ಮತ್ತು ಸಹೋದರತ್ವಗಳು ಪ್ರಜಾಪ್ರಭುತ್ವದ ಅಡಿಗಲ್ಲುಗಳು ಕಾಯಕ ಹಾಗೂ ದಾಸೋಹದ ಮೂಲಕ ಆರ್ಥಿಕ ಸಮಾನತೆ ಮೇಲುವರ್ಗ ಹಾಗೂ ಕೆಳವರ್ಗದಲ್ಲಿ ಸಮಾನತೆಯನ್ನು ಸಾಧಿಸಿದ ಸ್ತ್ರೀಯರಿಗೂ ಸಮಾನತೆಯನ್ನು ತಂದುಕೊಡುವಲ್ಲಿ ಧಾರ್ಮಿಕ ಸಮಾನತೆಯನ್ನು ತಂದುಕೊಟ್ಟರು ಬಸವಣ್ಣನವರ ಅನುಭವ ಮಂಟಪದಲ್ಲಿ ಸ್ವಾತಂತ್ರ್ಯಕ್ಕೆ ಅವಕಾಶ ನೀಡಿದರು ಜಾತಿ ಲಿಂಗ ವರ್ಣ ಭೇದವಿಲ್ಲದೆ ಸಮಾನತೆಯನ್ನು ಸಾಧಿಸಿದ ಆರ್ಥಿಕ ಸಾಮಾಜಿಕ ಆರ್ಥಿಕ ರಾಜಕೀಯ ಇನ್ನೂ ಹಲವಾರು ಕ್ಷೇತ್ರಗಳಲ್ಲಿ ಸಮಾನತೆಯನ್ನು ಬಸವಣ್ಣನವರು ಅಸಮಾನತೆಗೆ ಸಾಕ್ಷಿಯಾಗಿವೆ ಬಸವಣ್ಣನವರು ಕರ್ನಾಟಕದಲ್ಲಷ್ಟೇ ಅಲ್ಲ ಇಡೀ ಜಾಗತಿಕ ಮಟ್ಟದಲ್ಲಿ ಚಿಂತನೆ ವಿಚಾರಗಳನ್ನು ಹೊಂದಿದೆ ಅವರ ಹೊಸ ಹೊಸ ಚಿಂತನೆ ವಿಚಾರಗಳನ್ನು ಹೊಂದಿದ ಹೊಂದಿರುವ ಧರ್ಮವಿದೆ ಈ ಧರ್ಮವು ವಿಶ್ವ ಧರ್ಮ ವೆನಿಸಿದೆ.

## ಆಧಾರ ಗ್ರಂಥಗಳು


1. ಬಸವನಾಳ ಶಿವಲಿಂಗಪ್ಪ (೧೯೯೦) ಬಸವಣ್ಣನವರ ವಚನಗಳು ಲಿಂಗಾಯತ ವಿದ್ಯಾಭಿವೃದ್ಧಿ ಸಂಸ್ಥೆ ಧಾರವಾಡ.
2. ಪಾಟೀಲ ವಸಂತ (೧೯೯೦) ಬಸವಣ್ಣನವರ ದೃಷ್ಟಿಯಲ್ಲಿ ಸಮಾನತೆ ಅನುಭವ ಮತ್ತು ಸ್ತ್ರೀ ಕುಮಾರೇಶ್ವರ ವಿದ್ಯಾಪ್ರಸಾರ ಸಮಿತಿ ಸ್ವಾಮಿ ಮಠ ಸವದತ್ತಿ.
3. ಪೂಜಾರ ವಿ. ಜಿ (೨೦೧೦) ಬಸವಣ್ಣ ಕನ್ನಡ ಅಧ್ಯಯನ ಸಂಸ್ಥೆ ಗುಲಬರ್ಗಾ ವಿಶ್ವವಿದ್ಯಾಲಯ ಗುಲಬರ್ಗಾ.
4. ಮರುಳಸಿದ್ದಯ್ಯ ಹೆಚ್. ಎಂ. (೨೦೦೪) ಅರಿವು ಆಚರಣೆ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.
5. ಶ್ರೀನಿವಾಸಮೂರ್ತಿ ಎನ್ ಆರ್ ೨೦೦೨ ವಚನಧರ್ಮಸಾರ ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.